## ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಜಿ.ಎಲ್.ಬಿ/810/2016/ಎಆರ್‌ಇ-20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ:21-04-2022

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3)ರ ಅನ್ವಯ ವರದಿ***

ವಿಷಯ: (1) ಶ್ರೀ ಪ್ರಭುದಾಸ ನಂದು ಜಾದವ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಲಬುರ್ಗಾ, ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ ಜಿಲ್ಲೆ, (2) ವಿಜಯಕುಮಾರ್ ಮಡ್ಡೆ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬಾಲ್ಕಿ, ಬೀದರ ಜಿಲ್ಲೆ, (3) ಶ್ರೀ ಬಾಬುರಾವ ಮೊಳಕೆರೆ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಭಾಲ್ಕಿ, ಬೀದರ ಜಿಲ್ಲೆ ಮತ್ತು (4) ಶ್ರೀ ಸೂರ್ಯಕಾಂತ ಎಕಲಾರೆ, ನಿವೃತ್ತ ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ, ಬೀದರ ಜಿಲ್ಲೆ ಇವರುಗಳು ಸಾರ್ವಜನಿಕ/ಸರ್ಕಾರಿ ನೌಕರರಾಗಿ ಎಸಗಿದ ದುರ್ವರ್ತನೆಯ ಕುರಿತು.

****

ದೂರುದಾರರಾದ ಶ್ರೀ. ಪ್ರಕಾರ ಬಿ. ಪ್ರಭಾರ ಅಧ್ಯಕ್ಷರು, ಶುಭಾಶ್ ಯುವಕರ ಸಂಘ ಟ್ರಸ್ಟ (ನೋ), ಹಲಬರ್ಗಾ ಗ್ರಾಮ, ಬಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀ ಪ್ರಭುದಾಸ ನಂದು ಜಾದವ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಲಬುರ್ಗಾ, ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ ಜಿಲ್ಲೆ, (2) ವಿಜಯಕುಮಾರ್ ಮಡ್ಡೆ,

ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬಾಲ್ಕಿ, ಬೀದರ ಜಿಲ್ಲೆ, (3) ಶ್ರೀ ಬಾಬುರಾವ ಮೊಳಕೆರೆ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಭಾಲ್ಕಿ, ಬೀದರ ಜಿಲ್ಲೆ ಮತ್ತು (4) ಶ್ರೀ ಸೂರ್ಯಕಾಂತ ಏಕಲಾರೆ, ನಿವೃತ್ತ ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ, ಬೀದರ ಜಿಲ್ಲೆ (ಇನ್ನು ಮುಂದೆ ಎದುರುದಾರ-1 ರಿಂದ 4 ಎಂದು ಕ್ರಮವಾಗಿ ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರಾದ ನಂ.1- ಶ್ರೀ. ಪ್ರಭುದಾಸ ನಂದು ಜಾದವ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಲಬರ್ಗಾ ಗ್ರಾಮ ಪಂಚಾಯತಿ, ನಂ.2-ವಿಜಯಕುಮಾರ್ ಮಡ್ಡೆ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಬಾಲ್ಕಿ ರವರ ವಿರುದ್ಧ ಹಲಬರ್ಗಾ ಗ್ರಾಮ ಪಂಚಾಯತಿಯಲ್ಲಿ ಡಿಸೆಂಬರ್ 2014 ರಿಂದ 2016ನೇ ಸಾಲಿನ ಅವದಿಯ **ಬಿಆರ್‌ಜಿಎಫ್** ಅನುದಾನವನ್ನು, ಡಿಸೆಂಬರ್ 2014 ರಿಂದ 2016ನೇ ಸಾಲಿನ ಅವದಿಯ ನಿಧಿ-1 ಮತ್ತು ನಿಧಿ-2ರ ಅನುದಾನವನ್ನು ದುರ್ಬಳಕೆ ಮಾಡಿಕೊಂಡಿದ್ದು ಮತ್ತು 13ನೇ ಹಣಕಾಸು ಯೋಜನೆ ಅಡಿಯಲ್ಲಿ 2014 ರಿಂದ 2016ನೇ ಸಾಲಿನ ಅವಧಿಯಲ್ಲಿ ಕೈಗೊಂಡ ಕಾಮಗಾರಿಯಲ್ಲಿ ಮತ್ತು ಡಿಸೆಂಬರ್ 2014 ರಿಂದ 2016ನೇ ಸಾಲಿನ ಅವಧಿಯ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳಲ್ಲಿ ಅಕ್ರಮವೆಸಗಿರುತ್ತಾರೆಂದು, ಮುಂದುವರೆದು 2015-16ನೇ ಸಾಲಿನಲ್ಲಿ MGNREG ಯೋಜನೆ ಅಡಿಯಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳದೆ ಇದ್ದರೂ ಸಹ ಸುಳ್ಳು ಬಿಲ್ಲುಗಳನ್ನು ಮಾಡಿರುತ್ತಾರೆ ಎಂದು, ಸರ್ಕಾರದ ಹಣ ದುರ್ಬಳಕೆ ಮತ್ತು ಕರ್ತವ್ಯ ಲೋಪವೆಸಗಿರುತ್ತಾರೆಂದು ಆರೋಪಿಸಿರುತ್ತಾರೆ.

3. ದೂರಿನ ಆರೋಪಣೆಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಪೋಲೀಸ್ ಉಪಾಧೀಕ್ಷಕರು ಕರ್ನಾಟಕ ಲೋಕಾಯುಕ್ತ ಬೀದರ್ ಜಿಲ್ಲೆ ಇವರಿಗೆ ಸೂಚಿಸಲಾಗಿತ್ತು.

4. ಪೋಲೀಸ್ ಉಪಾಧೀಕ್ಷಕರು ಕರ್ನಾಟಕ ಲೋಕಾಯುಕ್ತ ಬೀದರ್ ಜಿಲ್ಲೆ ಇವರು ಪ್ರಕರಣದ ತನಿಖೆಯನ್ನು ಕೈಗೊಂಡು ತನಿಖಾ ವರದಿಯನ್ನು ದಿನಾಂಕ 18-12-2019 ರಂದು ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಲಾಗಿದೆ;

i). ನಿಧಿ-2 ರ ಅನುದಾನದ ಬಿಡುಗಡೆ ಕಾಲಕ್ಕೆ ಶ್ರೀ. ಪ್ರಭುದಾಸ ನಂದು ಜಾದವ್, ಪಿ.ಡಿ.ಒ ರವರು ದೋಷಪೂರಿತ ವೋಚರ್‌ಗಳನ್ನು ಪರಿಗಣಿಸಿ ಚೆಕ್ ಮೂಲಕ ಹಣ ಬಿಡುಗಡೆ ಮಾಡಿ ನಕಲಿ ಬಿಲ್ಲುಗಳನ್ನು ಪಾಸ್ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಕೆಲವು ವೋಚರ್‌ಗಳನ್ನು ಕ್ಯಾನ್ಸಲ್ ಮಾಡಿರುವುದಿಲ್ಲ, ಕೆಲವು ವೋಚರ್‌ಗಳಲ್ಲಿ ವೋಚರ್ ನೀಡಿದ ಅಂಗಡಿಯ ಟಿನ್ ನಂ, ವ್ಯಾಟ್ ಇತ್ಯಾದಿ ವಿವರ ನಮೂದು ಮಾಡದೆ ಇರುವ ವೋಚರ್‌ಗಳನ್ನು ಪರಿಗಣಿಸಿ ಹಣ ಪಾವತಿ ಮಾಡಿರುತ್ತಾರೆ. ಬಹಳಷ್ಟು ವೋಚರ್‌ಗಳ ಮೇಲೆ ದಿನಾಂಕ ನಮೂದು ಮಾಡದೆ ಇದ್ದರೂ ವೋಚರ್ ಪರಿಗಣಿಸಿ ಚೆಕ್ ಪಾವತಿಸಿರುತ್ತಾರೆ. ಹೀಗೆ ನಿಧಿ-2 ಸರ್ಕಾರದ ಅನುದಾನದಲ್ಲಿ ಅಂದಾಜು ರೂ. 2,82,775/- ಗಳ ಸರ್ಕಾರದ ಅನುದಾನ ದುರುಪಯೋಗ ಪಡಿಸಿಕೊಂಡು ತಮ್ಮ ಕರ್ತವ್ಯ ಲೋಪವೆಸಿಗಿರುವುದು ಕಂಡು ಬರುತ್ತದೆ.

ii). 13ನೇ ಹಣಕಾಸು ಯೋಜನೆ ಅಡಿಯಲ್ಲಿ ಅನುದಾನ ಬಿಡುಗಡೆ ಕಾಲಕ್ಕೆ ಶ್ರೀ. ಪ್ರಭುದಾಸ ನಂದು ಜಾದವ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರು ದೋಷಪೂರಿತ ವೋಚರ್‌ಗಳನ್ನು ಪರಿಗಣಿಸಿ, ಕಾಮಗಾರಿ ಕೈಗೊಳ್ಳದೆ ಇರುವ ದುರಸ್ತಿಯ ಹೆಸರಿನಲ್ಲಿ ನಕಲಿ ಬಿಲ್ಲುಗಳನ್ನು ಪಾಸು ಮಾಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ ಹಾಗೂ ಕ್ರಿಯಾ ಯೋಜನೆಗಳನ್ನು ಅನುಷ್ಠಾನಗೊಳಿಸುವ ಕಾಲಕ್ಕೆ ಕೇಂದ್ರ ಸರ್ಕಾದ ಮಾರ್ಗಸೂಚಿ ಮತ್ತು ಕರ್ನಾಟಕ ಪಾರದರ್ಶಕತೆಯ ಅಧಿನಿಯಮ

2

ಪಾಲನೆ ಮಾಡದೆ, ನೋಂದಾಯಿತ ಫರ್ಮ ಇಲ್ಲದೆ ಇರುವ ಅಂಗಡಿಗಳಿಂದ ಸಾಮಾಗ್ರಿಗಳನ್ನು ಖರೀದಿಸಿರುವುದು ಕಂಡು ಬರುತ್ತದೆ. ಯಾವ ಕೆಲಸದ ಕುರಿತು ಸಾಮಾಗ್ರಿಗಳನ್ನು ಖರೀದಿಸಲಾಗಿದೆ ಎನ್ನುವ ವಿವರ ನಮೂದು ಮಾಡದೆ, ಸಾಮಾಗ್ರಿಗಳನ್ನು ಖರೀದಿಸಲು ನಿಯಮಗಳನ್ನು ಪಾಲಿಸಿರುವುದಿಲ್ಲ. ಯಾವುದೇ ಎಸ್ಟಿಮೇಟ್, ಎಮ್ ಬಿ ರೆಕಾರ್ಡ್ ಮಾಡದೇ ಚೆಕ್ ಪಾವತಿ ಮಾಡಿರುವುದು ಹಾಗೂ ಹೆಚ್ಚಿನ ಮೌಲ್ಯದ ಸಾಮಾಗ್ರಿಗಳನ್ನು ಖರೀದಿ ಮಾಡುವಾಗ ಟೆಂಡರ್ ಅಥವಾ ಪ್ರಕಟಣೆಯ ಮೂಲಕ ಜಾಹೀರಾತು ಪಡಿಸದೆ, ಕೊಟೇಷನ್‌ಗಳನ್ನು ಪಡೆಯದೆ ಒಂದೇ ಅಂಗಡಿಯಿಂದ ಬೇಕಾಬಿಟ್ಟಿಯಾಗಿ ಸಾಮಾಗ್ರಿಗಳನ್ನು ಖರೀದಿಸಿ ನಕಲಿ ಬಿಲ್ಲುಗಳನ್ನು ಪಾಸು ಮಾಡಿ ಸರ್ಕಾರದ ಅನುದಾನ ದುರುಪಯೋಗ ಆಗಲು ಸಹಕರಿಸಿ ಒಟ್ಟು ಅಂದಾಜು ರೂ. 8.11,934/- ಗಳ ಸರ್ಕಾರದ ಅನುದಾನ ದುರ್ಬಳಕೆ ಮಾಡಿಕೊಂಡಿರುತ್ತಾರೆ.

iii). ಡಿಸೆಂಬರ್ 2014 ರಿಂದ 2016ನೇ ಸಾಲಿನ ಅವಧಿಯ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ, 2014-15ನೇ ಸಾಲಿನಲ್ಲಿ 30 ಕಾಮಗಾರಿಗಳು ಮತ್ತು 2015-16ನೇ ಸಾಲಿನಲ್ಲಿ 45 ಕಾಮಗಾರಿಗಳನ್ನು ಹೀಗೆ ಒಟ್ಟು 75 ಕಾಮಗಾರಿಗಳನ್ನು ಕೈಗೊಂಡಿದ್ದು, ಸದರಿ ಕಾಮಗಾರಿಗಳನ್ನು ಪರಿವೀಕ್ಷಣೆ ಮಾಡಲಾಗಿ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ 2014-15 ಮತ್ತು 2015-16ನೇ ಸಾಲಿನ ಒಟ್ಟು 11 ಕಾಮಗಾರಿಗಳು ಅಳತೆ ಪುಸ್ತಕ ಮತ್ತು ಅಂದಾಜು ಪತ್ರಿಕೆಗಳಲ್ಲಿ ನಮೂದು ಮಾಡಿದಂತೆ ಕಾಮಗಾರಿ ಕೈಗೊಳ್ಳದೆ ಇದ್ದರೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರು ಕಾಮಗಾರಿ ಹಣ ಬಿಡುಗಡೆ ಮಾಡಿ ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುತ್ತಾರೆ.

iv). ಮುಂದುವರೆದು ಹಲಬರ್ಗಾ ಗ್ರಾಮ ಪಂಚಾಯತಿಯ ಕಛೇರಿಯಲ್ಲಿ ಅಳತೆ ಪುಸ್ತಕದಲ್ಲಿ ಕಾಮಗಾರಿ ಅಳತೆಗಳನ್ನು ಶ್ರೀ. ಬಾಬುರಾವ್ ಮೋಳಕೇರೆ section officer (Junior Engineer) ಗ್ರಾಮ ಪಂಚಾಯತ್ ಹಲಬರ್ಗಾ ರವರು ಮಾಡಿದ್ದು, ಸದರಿ ಕಾಮಗಾರಿಗಳು ನಿರ್ವಹಿಸಿದಂತೆ ಅಳತೆ ಪುಸ್ತಕಗಳಲ್ಲಿ ನಮೂದು ಮಾಡದೆ ಮತ್ತು ಸರಿಯಾಗಿ ನಿರ್ವಹಣೆ ಮಾಡದೆ ಕರ್ತವ್ಯಲೋಪ ಎಸಗಿರುತ್ತಾರೆ ಹಾಗೂ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರು ಸಲ್ಲಿಸಿದ ವೋಚರಿನ ಮೇಲೆ ದಿನಾಂಕ ನಮೂದು ಮಾಡಿದಿದ್ದರೂ ಸಹ ಶ್ರೀ. ಸೂರ್ಯಕಾಂತ ಎಕಲಾರೆ, ಲೆಕ್ಕಾಧಿಕಾರಿಗಳು, ತಾಲ್ಲೂಕು ಪಂಚಾಯತ್, ಬಾಲ್ಕಿ ರವರು ಬಿಲ್ ಆಫ್ ಕಾಸ್ಟ ಮೇಲೆ ಮೇಲ್ ರುಜು ಮಾಡಿ ಕರ್ತವ್ಯ ಲೋಪ ಎಸಗಿರುತ್ತಾರೆ. ಮುಂದುವರೆದು ವಿಜಯಕುಮಾರ್ ಮಡ್ಡೆ, ಕಾರ್ಯನಿರ್ವಾಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಬಾಲ್ಕಿ ರವರು ಅಳತೆ ಪುಸ್ತಕದಂತೆ ಕಾಮಗಾರಿಗಳ ನಿರ್ವಹಣೆ ಮಾಡದಿದ್ದರೂ ಸಹ ಕಾಮಗಾರಿಗಳ ದೃಡೀಕರಣ ಪತ್ರ ನೀಡಿ ಕರ್ತವ್ಯ ಲೋಪ ಎಸಗಿರುವುದು ವಿಚಾರಣೆಯಿಂದ ಕಂಡು ಬರುತ್ತದೆ.

5. ಪ್ರಸ್ತುತ ವರದಿಯಲ್ಲಿ ಉಲ್ಲೇಖಿಸಿರುವಂತೆ ಡಿಸೆಂಬರ್ 2014 ರಿಂದ 2016ನೇ ಸಾಲಿನ ಅವಧಿಯ ವರೆಗೆ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೈಗೊಂಡ 75 ಕಾಮಗಾರಿಗಳಲ್ಲಿ 11 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹಣ ದುರ್ಬಳಕೆ ಆಗಿರುವುದು ಮತ್ತು ಅಂದಾಜಿನಂತೆ ಕಾಮಗಾರಿ ನಡೆಸದೆ ಇದ್ದರೂ ಸಹ ಹಣ ಬಿಡುಗಡೆ ಮಾಡಿ ಕರ್ತವ್ಯ ಲೋಪವೆಸಗಿರುತ್ತಾರೆಂದು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್ ಇವರ ವರದಿಯಲ್ಲಿ ತಿಳಿಸಲಾಗಿದ್ದು, ಸದರಿ ಕಾಮಗಾರಿಗಳ ಕಾರ್ಯಗಳನ್ನು ನಿರ್ವಹಿಸಿದ ಶ್ರೀ. ಬಾಬುರಾವ್ ಮೋಳಕೇರೆ section officer (Junior Engineer) ಗ್ರಾಮ

ಪಂಚಾಯತ್ ಹಲಬರ್ಗಾ ಮತ್ತು ಶ್ರೀ. ಸೂರ್ಯಕಾಂತ ಎಕಲಾರೆ, ಲೆಕ್ಕಾಧಿಕಾರಿಗಳು, ತಾಲ್ಲೂಕು ಪಂಚಾಯತ್, ಬಾಲ್ಕಿ ರವರನ್ನು ಈ ದೂರಿನಲ್ಲಿ ಎದುರುದಾರ ಸಂಖ್ಯೆ.3 ಮತ್ತು 4 ಎಂದು ಸೇರಿಸಲಾಗಿದೆ.

6. ದೂರುದಾರರು ಸಲ್ಲಿಸಿರುವ ದೂರಿನ ಆರೋಪಣೆಗೆ ಮತ್ತು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್ ರವರ ದಿ: 18/02/2019ರ ತನಿಖಾ ವರದಿಗೆ ಆಕ್ಷೇಪಣೆ ಸಲ್ಲಿಸುವಂತೆ ಎದುರುದಾರ ಸಂಖ್ಯೆ. 1 ರಿಂದ 4 ರವರೆಗೆ ಸೂಚಿಸಲಾಗಿತ್ತು.

7. 1ನೇ ಎದುರುದಾರರು ದೂರಿನ ಆರೋಪಣೆಗೆ ಮತ್ತು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್ ರವರ ದಿ: 18/02/2019ರ ತನಿಖಾ ವರದಿಗೆ ಆಕ್ಷೇಪಣೆ ಸಲ್ಲಿಸಿರುವುದಿಲ್ಲ.

8. 2ನೇ ಎದುರುದಾರರು ಸಲ್ಲಿಸಿರುವ ದಿ: 15/03/2021ರ ಆಕ್ಷೇಪಣೆಯಲ್ಲಿ ದೂರಿನ ಆರೋಪಣೆಗಳನ್ನು ಮತ್ತು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್ ರವರ ದಿ: 18/02/2019ರ ತನಿಖಾ ವರದಿಯಲ್ಲಿ ತಿಳಿಸಿರುವ ವಿಷಯಗಳನ್ನು ಅಲ್ಲಗೆಳೆದಿರುತ್ತಾರೆ.

9. **"ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯಿತಿ, ಬಾಲ್ಕಿ ರವರು ಅಳತೆ ಪುಸ್ತಕದಂತೆ ಕಾಮಗಾರಿ ನಿರ್ವಹಣೆ ಮಾಡದೇ ಇದ್ದರೂ ಕಾಮಗಾರಿಯ ದೃಢೀಕರಣ ಪತ್ರ ನೀಡಿರುತ್ತಾರೆ"** ಎಂದು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್ ರವರ ದಿ: 18/02/2019ರ ತನಿಖಾ ವರದಿಯಲ್ಲಿ ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಎರಡನೇ ಎದುರುದಾರರು ಮುಂದುವರೆದು ಅವರ ಆಕ್ಷೇಪಣೆಯಲ್ಲಿ ತಾನು ಬಾಲ್ಕಿ ತಾಲ್ಲೂಕು ಪಂಚಾಯಿತಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯಾಗಿ ದಿ: 21/8/2014 ರಿಂದ 12/8/2016ರ ತನಕ ಕರ್ತವ್ಯ ನಿರ್ವಹಿಸಿದ್ದು, ಈ ಅವಧಿಯಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ

ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತ್‌ನಲ್ಲಿ ಕೈಗೊಂಡ ಕಾಮಗಾರಿಗಳ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ಕಾಮಗಾರಿಗಳಿಗೆ ದೃಢೀಕರಣ ನೀಡಿರುತ್ತೇನೆ, ಕಾಮಗಾರಿಗಳ ಅನುಷ್ಠಾನಗೊಳಿಸುವುದು ಗ್ರಾಮ ಪಂಚಾಯತ್, ಪಿಡಿಓ ಮತ್ತು ಅಧ್ಯಕ್ಷರ ಕರ್ತವ್ಯವಾಗಿತ್ತು ಮತ್ತು ಕೈಗೊಂಡ ಕಾಮಗಾರಿಗಳ ತಾಂತ್ರಿಕ ಮತ್ತು ಓಚರ್‌ಗಳನ್ನು ಪರಿಶೀಲಿಸಿ ಕಾಮಗಾರಿಗಳನ್ನು ಅಳತೆ ಮಾಡಿ ಎಂ.ಬಿ. ಪುಸ್ತಕದಲ್ಲಿ ದಾಖಲಿಸಿ ಸಿ.ಸಿ.ಬಿಲ್ ತಯಾರು ಮಾಡಿ ಅದಕ್ಕೆ ದೃಢೀಕರಿಸಿ ಹಣ ಬಿಡುಗಡೆ ಮಾಡಲು ಮಂಜೂರಾತಿ ನೀಡುವ ಅಧಿಕಾರ ಕಿರಿಯ ಅಭಿಯಂತರರು ಹೊಂದಿದ್ದರು ಹಾಗೂ ತಾಂತ್ರಿಕ ಸಂಯೋಜಕರು, ಎಂ.ಜಿ.ಎನ್.ಆರ್.ಇ.ಜಿ. ತಾಲ್ಲೂಕು ಪಂಚಾಯತ್, ಬಾಲ್ಕಿ ರವರು ಪರಿಶೀಲನೆ ಮಾಡಿ ನಂತರ ಲೆಕ್ಕಾಧಿಕಾರಿಗಳು ಹಾಗೂ ಹೆಚ್ಚುವರಿ ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯಿತಿ ಬಾಲ್ಕಿ ರವರು ಬಿಲ್ ಆಫ್ ಕಾಸ್ಟ್‌ನ್ನು ತನಿಖೆ ಮಾಡಿ ದೃಢೀಕರಿಸಿದ ನಂತರ ಅಂತಿಮವಾಗಿ ತನ್ನ ದೃಢೀಕರಣಕ್ಕೆ ಬರುತ್ತದೆ ಹಾಗೂ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಇದ್ದ ಒಟ್ಟು 35 ರಿಂದ 40 ಗ್ರಾಮ ಪಂಚಾಯಿತಿಗಳು ಕೈಗೊಳ್ಳುವ ಎಲ್ಲಾ ಕಾಮಗಾರಿಗಳನ್ನು ತಾನು ಖುದ್ದಾಗಿ ಬೇಟಿ ನೀಡಿ ಪರಿಶೀಲನೆ ಮಾಡಿ ನಂತರ ದೃಢೀಕರಣ ನೀಡಲು ಸಾಧ್ಯವಿರಲಿಲ್ಲ, ಆದುದರಿಂದ ಕಾಮಗಾರಿಯ ದಾಖಲೆಗಳನ್ನು ಪರಿಶೀಲನೆ ಮಾಡಿ ದಾಖಲೆಗಳ ಆಧಾರದ ಮೇಲೆ ತಾನು ದೃಢೀಕರಣ ನೀಡಿದ್ದೆ ಎಂದು ತಿಳಿಸಿ ದೂರನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

10. ಮೂರನೇ ಎದುರುದಾರರು ಸಲ್ಲಿಸಿರುವ ದಿ: 16/12/2020ರ ಆಕ್ಷೇಪಣೆಯಲ್ಲಿ ದೂರಿನ ಆರೋಪಣೆಗಳನ್ನು ಮತ್ತು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್ ರವರ ದಿ: 18/02/2019ರ ತನಿಖಾ ವರದಿಯಲ್ಲಿ ತಿಳಿಸಿರುವ ವಿಷಯಗಳನ್ನು ಅಲ್ಲಗೆಳೆದಿರುತ್ತಾರೆ.

11. ಮುಂದುವರೆದು ಮೂರನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ, ತಾನು 2015ನೇ ಇಸವಿಯಿಂದ 2018ನೇ ಇಸವಿಯ ತನಕ ಹಲಬರ್ಗ ಗ್ರಾಮ ಪಂಚಾಯಿತಿ ಸೇವೆ

ಸಲ್ಲಿಸಿರುತ್ತೇನೆ ಮತ್ತು ದೂರುದಾರರು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿರುವ ದೂರಿನಲ್ಲಿ ತನ್ನ ಹೆಸರಿನ್ನು ತಿಳಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.

12. ಪೊಲೀಸ್ ಉಪಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್ ಇವರ ದಿ: 18/12/2019ರ ತನಿಖಾ ವರದಿಗೆ ಸಂಬಂಧಿಸಿದಂತೆ ಮೂರನೇ ಎದುರುದಾರರು ಮುಂದುವರೆದ ಆಕ್ಷೇಪಣೆಯಲ್ಲಿ ಬಿ.ಆರ್.ಜಿ.ಎಫ್:ನಿಧಿ-1, ನಿಧಿ-2, 13ನೇ ಹಣಕಾಸು ಯೋಜನೆ ಇನ್ನಿತರ ಆಡಳಿತಾತ್ಮಕ ನಿರ್ಧಾರಗಳು ತನ್ನ ಕರ್ತವ್ಯಕ್ಕೆ ಸಂಬಂಧಿಸಿರಲಿಲ್ಲ ಹಾಗೂ 2014-15ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ. ಯೋಜನೆಗೆ ಸಂಬಂಧಿಸಿದ ಒಟ್ಟು 105 ಕಾಮಗಾರಿಗಳಲ್ಲಿ 48 ಶೌಚಾಲಯ ನಿರ್ಮಾಣ ಕಾಮಗಾರಿಯಾಗಿದ್ದು, ಇವುಗಳ ವಿವರ ತನಿಖೆಯಲ್ಲಿ ಇರುವುದಿಲ್ಲ ಮತ್ತು ಉಳಿದ 57 ಕಾಮಗಾರಿಗಳ ತನಿಖೆ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಮುಂದುವರೆದು ಮೂರನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದ 2014-15ನೇ ಸಾಲಿನ 4 ಕಾಮಗಾರಿಗಳು ಮತ್ತು 2015-16ನೇ ಸಾಲಿನ 7 ಕಾಮಗಾರಿಗಳು ಗುಣಮಟ್ಟದಿಂದ ಕೂಡಿಲ್ಲವೆಂದು ತನಿಖಾಧಿಕಾರಿಗಳು ಅಭಿಪ್ರಾಯಕ್ಕೆ ಬರುವ ಮೊದಲು ತನ್ನ ವಿವರಣೆಯನ್ನು ಪಡೆದಿರುವುದಿಲ್ಲ ಮತ್ತು ಯಾವ ಕಾರಣಕ್ಕೆ ಸದರಿ ಕಾಮಗಾರಿಗಳು ಗುಣಮಟ್ಟ ಇಲ್ಲವೆಂದು ತಾಂತ್ರಿಕ ಆಧಾರಗಳು ಕೊಟ್ಟಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಮುಂದುವರೆದು ಮೂರನೇ ಎದುರದಾರರು ತನ್ನ ಆಕ್ಷೇಪಣೆಯಲ್ಲಿ ತನಿಖಾಧಿಕಾರಿಗಳು ಸಲ್ಲಿಸಿರುವ ತನಿಖಾ ವರದಿಯಲ್ಲಿ ಸಾಮಾಗ್ರಿ ಖರೀದಿಯ ವೋಚರ್‌ಗಳ ಮೇಲೆ ದಿನಾಂಕ ನಮೂದಿಸಿಲ್ಲ ಮತ್ತು ಕಾಮಗಾರಿ ಅಳತೆ ಪುಸ್ತಕದಲ್ಲಿ ನಮೂದು ಮಾಡಿಲ್ಲ ಹಾಗೂ ಅಳತೆ ಪುಸ್ತಕದಂತೆ ಕಾಮಗಾರಿಯ ದೃಢೀಕರಣ ಪತ್ರವನ್ನು ಮೇಲಾಧಿಕಾರಿಗಳು ನೀಡಿರುತ್ತಾರೆ ಎಂದು ತನಿಖಾಧಿಕಾರಿ ಅಭಿಪ್ರಾಯಕ್ಕೆ ಬರುವ ಮೊದಲು ತನ್ನ ವಿವರಣೆ ಪಡೆದಿರುವುದಿಲ್ಲ ಮತ್ತು ಸದರಿ ನ್ಯೂನತೆಗಳು ಆಡಳಿತಾತ್ಮಕವಾಗಿದ್ದು, ಅವುಗಳನ್ನು ಸರಿಪಡಿಸಿಕೊಳ್ಳಬಹುದಾಗಿರುತ್ತದೆ ಎಂದು ತಿಳಿಸಿ ದೂರನ್ನು ಮುಕ್ತಾಯಗೊಳಿಸುವಂತೆ ಕೋರಿರುತ್ತಾರೆ.

13. 4ನೇ ಎದುರುದಾರರು ಸಲ್ಲಿಸಿರುವ ದಿ: 7/9/2020ರ ಆಕ್ಷೇಪಣೆಯಲ್ಲಿ ತಾನು 2014-15ನೇ ಇಸವಿಯಲ್ಲಿ ಬಾಲ್ಕಿ ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಹುದ್ದೆಯ ಪ್ರಭಾರವನ್ನು ಹೊಂದಿದ್ದೆ ಮತ್ತು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳಡಿಯಲ್ಲಿ ತಾಲ್ಲೂಕಿನ ವಿವಿಧ ಸ್ಥಳಗಳಲ್ಲಿ ಕಾಮಗಾರಿ ಕೈಗೊಂಡು ವರದಿ ಮಾಡಿದ ಸಂದರ್ಭದಲ್ಲಿ ತಾಲ್ಲೂಕಿಗೆ ಗೊತ್ತು ಪಡಿಸಿದ ತಾಂತ್ರಿಕ ಸಹಾಯಕರೊಂದಿಗೆ ಬೌತಿಕ ಕಾಮಗಾರಿಗಳ ವಿಕ್ಷಣೆ ಮಾಡಿದ್ದು ಮತ್ತು ತಾಂತ್ರಿಕ ಸಹಾಯಕರು ಪರಿವೀಕ್ಷಣೆ ನಡೆಸಿದ್ದು ನಂತರ ಸಂಬಂಧಿಸಿದ ದಾಖಲೆಗಳ ಮೇಲೆ ಸಹಿ ಮಾಡಿರುತ್ತೇನೆ. ತಾಲ್ಲೂಕು ಪಂಚಾಯತ್ ಲೆಕ್ಕಾಧಿಕಾರಿಯು ವೋಚರ್ ಸಂಖ್ಯೆ ನಮೂದಿಸಿದ ಬಿಲ್ ಆಫ್ ಕಾಸ್ಟ್ ಮೇಲೆ ಸಹಿ ಮಾಡಿರುತ್ತಾರೆ ಎಂದು ಆರೋಪಿಸಿರುವುದು ಸರಿಯಾಗಿರುವುದಿಲ್ಲ ಎಂದು ತಿಳಿಸಿ ದೂರನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

14. ಮೇಲೆ ತಿಳಿಸಲಾದಂತೆ ದೂರಿನ ಆರೋಪಣೆಗಳು ಸಾಬೀತಾಗಿರುತ್ತದೆ ಎಂದು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಇವರು ಸಲ್ಲಿಸಿರುವ ದಿ: 18/12/2019ರ ತನಿಖಾ ವರದಿಯಲ್ಲಿ ತಿಳಿಸಲಾಗಿದೆ. ತನಿಖಾ ವರದಿಯಲ್ಲಿ ತಿಳಿಸಿರುವ ಮುಖ್ಯ ವಿಷಯಗಳನ್ನು ಮೇಲೆ ವಿವರಿಸಲಾಗಿದೆ. ಪ್ರಸ್ತುತ ಈ ಹಂತದಲ್ಲಿ ದೂರಿನ ಆರೋಪಣೆಗಳನ್ನು ಮತ್ತು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್ ಇವರು ಸಲ್ಲಿಸಿರುವ ದಿ: 18/12/2019ರ ತನಿಖಾ ವರದಿಯ ವಿಷಯಗಳನ್ನು ಒಪ್ಪದೇ ಇರುವಂತಹ ಸಂದರ್ಭಗಳು ಮತ್ತು ಅಂಶಗಳನ್ನು ಎದುರುದಾರ ಸಂಖ್ಯೆ. 2 ರಿಂದ 4 ರವರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ ತಿಳಿಸಿರುವುದಿಲ್ಲ. ಎದುರದಾರ ಸಂಖ್ಯೆ. 2 ರಿಂದ 4 ರವರು ಸಲ್ಲಿಸಿರುವ ಆಕ್ಷೇಪಣೆಗಳ ವಿಷಯವನ್ನು ಈ ಹಂತದಲ್ಲಿ ಅಂದರೆ ವಿವರವಾದ ವಿಚಾರಣೆ ನಡೆಸದೇ ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ಕಡತದ ದಾಖಲೆಗಳನ್ನು ಮತ್ತು ದೂರಿನ ಆರೋಪಣೆಗಳನ್ನು ಹಾಗೂ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್ ಇವರು ಸಲ್ಲಿಸಿರುವ ದಿ: 18/12/2019ರ ತನಿಖಾ ವರದಿಯ ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಬೀದರ್ ಜಿಲ್ಲೆ ಬಾಲ್ಕಿ ತಾಲ್ಲೂಕಿನ ಹಲಬರ್ಗ ಗ್ರಾಮ ಪಂಚಾಯಿತಿಗೆ ನಿಧಿ-

5

2ರ ಅನುದಾನದ ಹಣಕ್ಕೆ ಸಂಬಂಧಿಸಿದಂತೆ ಹಾಗೂ 13ನೇ ಹಣಕಾಸು ಯೋಜನೆಯ ಅನುದಾನಕ್ಕೆ ಸಂಬಂಧಿಸಿದಂತೆ ಮತ್ತು 2014-16ನೇ ಸಾಲಿನ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ 11 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್ ಇವರು ಸಲ್ಲಿಸಿರುವ ದಿ: 18/12/2019ರ ತನಿಖಾ ವರದಿಯಲ್ಲಿ ವಿವರಿಸಿದಂತೆ 1 ರಿಂದ 4ನೇ ಎದುರುದಾರರು ಹಣ ದುರುಪಯೋಗ ಪಡಿಸಿಕೊಂಡು, ಕರ್ತವ್ಯ ನಿರ್ಲಕ್ಷತನ ತೋರಿಸಿ ಸರ್ಕಾರಿ ನೌಕರನಿಗೆ/ಸಾರ್ವಜನಿಕ ನೌಕರರಿಗೆ ತಕ್ಕದಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆ.

15. ಆದ್ದರಿಂದ ಎದುರುದಾರ ಸಂ:1 ರಿಂದ 4 ರವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ ಮತ್ತು ಸಾರ್ವಜನಿಕರ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಕಂಡುಬಂದಿರುತ್ತದೆ. ಆದುದರಿಂದ ಮೇಲಿನ ಕಾರಣ ಮತ್ತು ದಾಖಲೆಗಳ ಆಧಾರದ ಮೇರೆಗೆ **1 ರಿಂದ 3ನೇ ಎದುರುದಾರರ** ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಿ, ವಿವರವಾದ ಇಲಾಖಾ ವಿಚಾರಣೆ ನಡೆಸಲು ಹಾಗೂ ವಿಚಾರಣೆ ನಡೆಸುವ ಸಲುವಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅನ್ವಯ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ವಹಿಸಿಕೊಡುವಂತೆ ಹಾಗೂ **ನಾಲ್ಕನೇ ಎದುರುದಾರರಾದ ಶ್ರೀ ಸೂರ್ಯಕಾಂತ್ ಏಕಲಾರೆ** ಇವರು **ದಿನಾಂಕ: 30/09/2020ರಂದು** ನಿವೃತ್ತರಾಗಿರುವುದರಿಂದ ಸಕ್ಷಮ ಪ್ರಾಧಿಕಾರವು ಕರ್ನಾಟಕ ನಾಗರೀಕ ಸೇವಾ ನಿಯಮ 214(2)(ಬಿ)(ii) ಪ್ರಕಾರ ಇಲಾಖಾ ವಿಚಾರಣೆ ನಡೆಸಲು ಕಾಲ ಪರಿಮಿತಿಯ ಬಗ್ಗೆ ಅವಲೋಕಿಸಿ, ಕರ್ನಾಟಕ ಲೋಕಾಯುಕ್ತ

ಕಾಯ್ದೆ, 1984ರ ಕಲಂ 12(3)ರ ಅಡಿಯಲ್ಲಿ ದತ್ತವಾದ ಅಧಿಕಾರದಿಂದ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

16. ಮುಂದುವರೆದು, ಎದುರುದಾರರವರುಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಸ್ವೀಕೃತವಾದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K.N. Phanindra 21/4/20

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ.**